ಖಜಾನೆಯ ಪ್ರಕಾರ, ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ದಿ: 24–06–06 ರಂದು 3 ಕೋಟಿ 2 ಲಕ್ಷ ರೂ. ಅನುದಾನ ಲಭ್ಯವಿರುತ್ತದೆ. ಜಿಲ್ಲೆಯಲ್ಲಿ ಸಂತ್ರಸ್ತರಿಗೆ ಪರಿಹಾರವನ್ನು ವಿತರಿಸಲು ಹಣದ ಸಮಸ್ಯೆ ಇರುವುದಿಲ್ಲ. ಪರಿಹಾರವನ್ನು ಅತ್ಯಂತ ತ್ವರಿತವಾಗಿ ವಿತರಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1–04–2006 ರಿಂದ ಇಲ್ಲಿಯವರೆಗೆ ಪ್ರಕೃತಿ ವಿಕೋಪದಿಂದ ಹಾನಿ ಹಾಗೂ ಪರಿಹಾರದ ವಿವರಗಳು ಈ ಕೆಳಕಂಡಂತೆ ಇವೆ:

1)	ಜೀವ ಹಾನಿ	4 – 2 ಲಕ್ಷ ಪರಿಹಾರಧನವನ್ನು ವಿತರಿಸಲಾಗಿದೆ.
2)	ಗಾಯಗೊಂಡವರು	1 – 5,000ರೂ.
3)	ಮಳೆಹಾನಿ ಕಚ್ಚಾ ಮತ್ತು ಪಕ್ಕಾ	346 – 7 ಲಕ್ಷ 75 ಸಾವಿರ ಪರಿಹಾರಧನ
	ಒಟ್ಟು	**9.80 ಲಕ್ಷ ರೂ. ಪರಿಹಾರ ಧನವನ್ನು ವಿತರಿಸಲಾಗಿದೆ.**

ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ಹಾನಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1)	ಜಿಲ್ಲಾ ಪರಿಷತ್ತು ಆಸ್ತಿಗಳು	233 – 405 ಲಕ್ಷ ರೂ. ನಷ್ಟ ಉಂಟಾಗಿದೆ.
2)	ಲೋಕೋಪಯೋಗಿ ಇಲಾಖೆಯ ಆಸ್ತಿಗಳು	25 – 51.95 ಲಕ್ಷ ರೂ.
3)	ನಗರ/ಸ್ಥಳೀಯ ಸಂಸ್ಥೆಗಳ ಆಸ್ತಿಗಳು	48 – 113.85 ಲಕ್ಷ ರೂ.
4)	ದೋಣಿಗಳು	2 – 12.80 ಲಕ್ಷ ರೂ.
5)	ವಿದ್ಯುತ್ ಇಲಾಖೆ ನಷ್ಟ	423 – 68.97 ಲಕ್ಷ ರೂ.
6)	ಖಾಸಗಿ ಆಸ್ತಿ ಹಾನಿ	333 – 29.20 ಲಕ್ಷ ರೂ.
7)	ಕೃಷಿ, ತೋಟಗಾರಿಕೆ ಬೆಳೆಗಳ ಹಾನಿ	1.01 – 4.70 ಲಕ್ಷ ರೂ.
	ಒಟ್ಟು	680.47 ಲಕ್ಷ ರೂ. ನಷ್ಟವುಂಟಾಗಿದೆ.

ಉಲ್ಲಾಳ, ಕೋಟಿಪುರ್, ಕೋಡಿ, ಮೊಗವೀರ ಪಟ್ಟಣ, ಮುಕಾಬೇರಿ ಪ್ರದೇಶದಲ್ಲಿ 2. ಕಿ.ಮಿ. ನಷ್ಟು ಕೊರೆತ ಉಂಟಾಗಿದ್ದು, ಕಾರ್ಯಪಾಲಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ, ಉಡುಪಿ, ಇವರು ಈಗಾಗಲೇ 360 ಮೀಟರ್‌ಗಳಷ್ಟು ಕಡಲ ಕೊರೆತವನ್ನು ತಡೆಗಟ್ಟಲು 60 ಲಕ್ಷ ರೂ. ವೆಚ್ಚದಲ್ಲಿ ದೊಡ್ಡ ಬಂಡೆಗಲ್ಲುಗಳನ್ನು ಹಾಕಿರುತ್ತಾರೆ.

ಅಧ್ಯಕ್ಷರು : ಮಾನ್ಯ ತಿಮ್ಮರಾಯಪ್ಪನವರು – ಇಲ್ಲ.

(ಎ) ವಿಷಯ : ಹಂಪಿಯ ಕಮಲಾಪುರದಲ್ಲಿ 'ಹಂಪಿ ಉಳಿಸಿ ಆಂದೋಲನ ಸಮಿತಿ' ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರವಾಗಿರುವುದು.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಕಮಲಾಪುರದಲ್ಲಿ ಲಾಠಿ ಪ್ರಹಾರವಾಗಿರುವುದರ ಬಗ್ಗೆ ನಾನು ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ. ಹಂಪಿ ಈರಣ್ಣ ದೇವರ ಪೂಜೆಗೆ ಹೋಗುತ್ತಿದ್ದಂತಹ 'ಹಂಪಿ ಉಳಿಸಿ ಆಂಧೋಲನ ಸಮಿತಿ'ಯ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ ನಡೆದಿದೆ. ಹಂಪಿ ಈಗಾಗಲೇ ವಿಶ್ವ ಪರಂಪರೆ ಪಟ್ಟಿಗೆ ಸೇರಿರುವುದರಿಂದ ಅಲ್ಲಿ ಯಾವುದೇ ಕಟ್ಟಡ ಕಟ್ಟುವುದಾಗಲಿ, ಬಣ್ಣ ಬಳಿಯುವುದಾಗಲಿ ಅವಕಾಶ ಇಲ್ಲದಿದ್ದರೂ,

ಹೊಸದಾಗಿ ಕಟ್ಟಡ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟು, ಅದನ್ನು ತಪ್ಪು ಎಂದು ಹೇಳಿದವರ ಮೇಲೆ ಮತ್ತು ಹೊಸ ಆಚರಣೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಅದನ್ನು ತಪ್ಪು ಎಂದು ಹೇಳಿದವರ ಮೇಲೆ ಲಾಠಿ ಪ್ರಹಾರ ಮಾಡುವಂತಹ ಕಾರ್ಯ ಜರುಗಿದೆ. ಇದರ ಬಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 25-06-06 ರಂದು ಮುರು ದಿವಸಗಳವರೆಗೆ ಹಂಪಿಯ ಪುರಂದರದಾಸರ ಮಂಟಪದ ಹತ್ತಿರದಲ್ಲಿದ್ದ ಹಜರತ್ ಹೊನ್ನೂರು ವಲಿ ದರ್ಗಾದಲ್ಲಿ ಉರುಸ್ ಆಚರಿಸುವ ಸಂಪ್ರದಾಯ ಬಹಳ ವರ್ಷಗಳಿಂದ ಇದೆ. ಆ ಸಂಪ್ರದಾಯಕ್ಕನುಗುಣವಾಗಿ ಅವರು ಉರುಸ್ ಆಚರಿಸುವಂತಹ ವಿಚಾರದಲ್ಲಿ ವೀರಣ್ಣ ದೇವರ ಗುಡಿಗೆ ಅತಿಕ್ರಮವಾಗಿ ಅಲ್ಲಿ ಕಟ್ಟಿದ್ದಾರೆ ಎನ್ನುವುದರ ಬಗ್ಗೆ ಒಂದು ವಿವಾದ ಸೃಷ್ಟಿಯಾಗಿ 'ಹಂಪಿ ಉಳಿಸಿ ಆಂದೋಲನ ಸಮಿತಿ'ಯ ಅಲ್ಲಿನ ಶ್ರೀಮಾನ್ ಅಚ್ಯುತದೇವರಾಯರ ನೇತೃತ್ವದಲ್ಲಿ ನಡೆಯುತ್ತದೆ. ಅದರ ಜೊತೆಗೆ, ಆರ್.ಎಸ್.ಎಸ್.ನ ಕೆಲವು ಸ್ವಯಂ ಸೇವಕರು, 'ಹಂಪಿ ಉಳಿಸಿ ಆಂಧೋಲನ ಸಮಿತಿ'ಯ ಕೆಲವು ವ್ಯಕ್ತಿಗಳು ಹಾಗೂ ಕೆಲವು ಸಂಘ-ಸಂಸ್ಥೆಗಳು ಈ ಬಗ್ಗೆ ಪ್ರತಿಭಟನೆ ಮಾಡುವ ಮೂಲಕ ನಮಗೂ ಅಲ್ಲಿ ಪೂಜೆ ಸಲ್ಲಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಮನವಿ ತಲುಪಿಸಿದರು. ಆ ಸಂದರ್ಭದಲ್ಲಿ ರಾಜ್ಯದ ಪುರಾತತ್ವ ಇಲಾಖೆಯನ್ನು ಈ ವಿಚಾರದಲ್ಲಿ ಕೇಳಿದಾಗ, ಆ ಪ್ರದೇಶದಲ್ಲಿ ಪುರಾತತ್ವ ಇಲಾಖೆ ವ್ಯಾಪ್ತಿಯಲ್ಲಿ ಏನು ಬರುತ್ತದೆ ಮತ್ತು ನಿಷಿದ್ಧ ಪ್ರದೇಶಗಳಾವುವು ಅತಿಕ್ರಮಣವಾಗಿರುವುದು ಯಾವುವು ಎನ್ನುವ ಬಗ್ಗೆ ವಿವರಗಳನ್ನು ಕೇಳಿದಾಗ ಪುರಾತತ್ವ ಇಲಾಖೆಯವರು 'ಅಲ್ಲಿ ಯಾವುದೇ ತರಹದ ಅತಿಕ್ರಮಣ ನಡೆದಿಲ್ಲ'ವೆಂಬ ಮಾತನ್ನು ಹೇಳುವುದರ ಜೊತೆಗೆ, 'ಅಲ್ಲಿ ಬಹಳ ವರ್ಷಗಳಿಂದಲೂ ಹಜರತ್ ಹೊನ್ನೂರು ವಲಿ ದರ್ಗಾ ಪೂಜೆ ನಡೆಯುತ್ತಿತ್ತು' ಎನ್ನುವುದರ ಬಗ್ಗೆ ವರದಿ ಕೊಟ್ಟಿದ್ದಾರೆ. ಅಲ್ಲಿ ಹೊಸ ಸಂಪ್ರದಾಯ ಬೆಳೆಸುವುದು ಬೇಡ. ಉರುಸ್ ಆಗುವಂಥ ಸಂದರ್ಭದಲ್ಲಿ ತಾವೂ ಕೂಡ ಪೂಜೆಗೆ ಹೋಗುವುದರ ಮೂಲಕ ಅಲ್ಲಿ ಕೋಮು ಘಟನೆಗಳು ನಡೆಯಬಹುದು. ಆ ಕಾರಣಕ್ಕೆ ನಾವು ಅದಕ್ಕೆ ಅವಕಾಶ ಕಲ್ಪಿಸಿಕೊಡುವುದಿಲ್ಲವೆಂದು ಪೊಲೀಸರು ಕ್ರಮ ಕೈಗೊಂಡರು. ಆದರೂ ಕೂಡ ಕಮಲಾಪುರದಲ್ಲಿ ಕೆಲವರು ಪ್ರತಿಭಟನೆ ನಡೆಸಿದರು. ಅವರಿಗೆ ಬುದ್ಧಿವಾದ ಹೇಳಿಯೂ ಪ್ರತಿಭಟನೆ ಮಾಡಿದಂಥ 12 ಜನರನ್ನು ದಸ್ತಗಿರಿ ಮಾಡಿ, ಅವರನ್ನು ಆ ದಿವಸ ಕಾನೂನಿಗೆ ಅನುಗುಣವಾಗಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ಆಗ ಹೊಸಪೇಟೆ ಮತ್ತು ಹೊಸಪೇಟೆಯ ಕೆಲವು ಭಾಗದಲ್ಲಿ ಸುಮಾರು 200-300 ಜನರು ಇದರ ಬಗ್ಗೆ ಪ್ರತಿಭಟಿಸಿದ ಸಂದರ್ಭದಲ್ಲಿ ಅವರನ್ನು ಅಲ್ಲಿಂದ ತೆರವು ಮಾಡಬೇಕು, ಶಾಂತಿಭಂಗಕ್ಕೆ ಅವಕಾಶ ಕಲ್ಪಿಸಿಕೊಡಲು ಸಾಧ್ಯವಿಲ್ಲವೆಂದು ಪೊಲೀಸ್ ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಹೇಳಿದಾಗಲೂ ಮನವರಿಕೆ ಆಗದಿದ್ದ ಕಾರಣಕ್ಕಾಗಿ ಅವರ ಮೇಲೆ ಲಘು ಲಾಠಿ ಪ್ರಹಾರ ಮಾಡಬೇಕಾಯಿತು. ಈಗ ಅಲ್ಲಿ ಪರಿಸ್ಥಿತಿ ಶಾಂತವಾಗಿದೆ, ಹೊಸ ಸಂಪ್ರದಾಯಗಳನ್ನು ಸೃಷ್ಟಿಸುವುದಕ್ಕಾಗಲಿ ಅಥವಾ ಹೊಸ ವಿವಾದಗಳನ್ನು ಸೃಷ್ಟಿಸುವುದಕ್ಕಾಗಲಿ, ಈ ಸರ್ಕಾರ ಅವಕಾಶ ಕಲ್ಪಿಸಿಕೊಡುವುದಿಲ್ಲ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಈ ಸದನ ಸಮಿತಿಯನ್ನು ನೀವು ಅಲ್ಲಿಗೆ ಕಳುಹಿಸಬೇಕು. ಈರಣ್ಣದೇವರ ಗುಡಿ ಅತಿಕ್ರಮಣ ಮಾಡಿ ದರ್ಗಾ ಕಟ್ಟಿದ್ದಾರೆ ಮತ್ತು ಬಹಳ ವರ್ಷಗಳಿಂದ ಅಲ್ಲಿ ಉರುಸ್ ಆಚರಿಸಿಕೊಂಡು ಬರಲಾಗುತ್ತಿದೆಯೆಂದು ಗೃಹ ಸಚಿವರು ಹೇಳಿದ್ದಾರೆ. 'ಬಹಳ' ಎಂದರೆ ಎಷ್ಟು ವರ್ಷಗಳಿಂದ? ಹಿಂದೆ ಸದನದಲ್ಲಿ ಉತ್ತರ ಕೊಟ್ಟಿದ್ದರು. 'ಹಜರತ್ ಹೊನ್ನೂರು ವಲಿ ದರ್ಗಾ ನಡೆಯುತ್ತಿರಲಿಲ್ಲ. ಕೆಲವು ಖಾಸಗಿಯವರು ಅಲ್ಲಿಗೆ ಹೋಗಿ ಬರುತ್ತಿದ್ದರು' ಎಂದು ಹಿಂದೆ ಉತ್ತರ ಕೊಟ್ಟಿದ್ದರು. ಹಜರತ್ ಹೊನ್ನೂರು ವಲಿ ಸತ್ತು 16 ವರ್ಷಗಳಾಗಿವೆ. ವಿಶ್ವ ಪರಂಪರೆ ಪಟ್ಟಿಗೆ ಹಂಪಿ ಸೇರಿ ಎಷ್ಟು ವರ್ಷವಾಯಿತು? ಬಹಳ ವರ್ಷ ಎಂದರೆ ದಾಖಲೆ ಏನು? ಆ ವ್ಯಕ್ತಿ ಸತ್ತು 16 ವರ್ಷಗಳಾಗಿವೆ. ಆಚರಣೆ ನಡೆದುಕೊಂಡು ಬಂದಿರುವುದು 16 ವರ್ಷಗಳಿಂದ. ಅಲ್ಲಿಂದೀಚೆಗೆ ಸಾರ್ವಜನಿಕ ಸ್ವರೂಪದಲ್ಲಿ ನಡೆಯುತ್ತಿರುವುದು 3–4 ವರ್ಷಗಳಿಂದ ಎಂದು ಹೇಳುತ್ತಾರೆ. ಅಂದರೆ, ಒಂದು ಕೋಮಿಗೆ ಅವಕಾಶ ಮಾಡಿಕೊಟ್ಟು, ಪರಂಪರೆಯಿಂದ ಬಂದಿರುವ ಈರಣ್ಣ ದೇವರ ಪೂಜೆಗೆ ಅಡ್ಡಿಪಡಿಸುವುದು ಸರ್ಕಾರದ ನೀತಿಯೇ ಎಂದು ತಮ್ಮ ಮುಲಕ ಪ್ರಶ್ನಿಸಲು ಇಚ್ಛಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಎಲ್ಲಿ ವಿವಾದ ಇಲ್ಲವೋ ಅಲ್ಲಿ ವಿನಾಕಾರಣ ವಿವಾದ ಸೃಷ್ಟಿಸುವುದಕ್ಕೆ ನಾವು ಅವಕಾಶ ಕಲ್ಪಿಸಿಕೊಡುವುದಿಲ್ಲ. ಇವು ಬಹಳ ಸೂಕ್ಷ್ಮವಾಗಿರುವ ವಿಚಾರಗಳು. ವೀರಣ್ಣ ದೇವರ ಪೂಜೆಯ ಅತಿಕ್ರಮಣವಾಗಿಲ್ಲವೆಂಬ ಮಾತನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪುರಾತತ್ವ ಇಲಾಖೆಗೆ ಸಂಪೂರ್ಣ ಸಂರಕ್ಷಣೆಯ ಜವಾಬ್ದಾರಿ ಇದೆ. ಅಲ್ಲಿ ವೀರಣ್ಣದೇವರ ಪೂಜೆಯಲ್ಲಿ ಅತಿಕ್ರಮ ಪ್ರವೇಶವಾದರೆ, ಪ್ರಥಮವಾಗಿ ಗೊತ್ತಾಗುವುದು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪುರಾತತ್ವ ಇಲಾಖೆಗೆ, ಅಲ್ಲಿ ಈಗ ಹೊಸದಾಗಿ ಒಂದು ವಿವಾದ ಸೃಷ್ಟಿಸುವ, ಕೆಲವು ಸಂಘಟನೆಗಳು ಮತ್ತು ಕೆಲವು ವ್ಯಕ್ತಿಗಳು ಈ ವಿಚಾರದಲ್ಲಿ ಪ್ರತ್ಯೇಕವಾಗಿ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಪ್ರಯತ್ನ, ಪೂಜೆ ಮಾಡತಕ್ಕಂಥ ಸದ್ಭಕ್ತರು ಇದ್ದರೆ, ಆ ಉರುಸ್ ನಡೆಯುವ ದಿವಸ ಪೂಜೆ ಮಾಡುತ್ತೇವೆಂದು ಹಠ ಹಿಡಿಯುವುದರಲ್ಲಿ ಯಾವ ಅರ್ಥ ಕೂಡ ಇಲ್ಲ. ಅವರು ನಿತ್ಯ ಪೂಜೆ ಮಾಡಬಹುದು. ಈರಣ್ಣ ಎಂದರೆ, ಅದು ವೀರಭದ್ರ ದೇವರು. ಅಲ್ಲಿರುವಂತಹ ವೀರಭದ್ರ ದೇವರು, ಉದ್ದಾನೆ ವೀರಭದ್ರ ಕೂಡ ಇದ್ದಾನೆ. ಆ ಕಾರಣಕ್ಕಾಗಿ ಅಲ್ಲಿ ಈ Heritage Site ಎಂದು ಹಂಪಿಯನ್ನು ಏನು ಘೋಷಣೆ ಮಾಡಿದ್ದಾರೆ, ಅದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಅದನ್ನು ವಿಶ್ವ ಪರಂಪರೆಯ ತಾಣವೆಂದು ಘೋಷಣೆ ಮಾಡಿದ್ದಕ್ಕೂ, ಈ ಉರುಸ್ ಆಚರಿಸುವ ಸಂದರ್ಭದಲ್ಲಿ ನಾವು ಪೂಜೆ ಮಾಡುತ್ತೇವೆ ಎನ್ನುವುದಕ್ಕೂ ಯಾವುದೇ ಸಂಬಂಧ ಕೂಡ ಇಲ್ಲ. ಇದರಿಂದ ಕೋಮು ಗಲಭೆಗಳುಂಟಾಗುತ್ತವೆ. ವಿನಾಕಾರಣ ದ್ವೇಷದ ಭಾವನೆಗಳು ಬೆಳೆಯುತ್ತದೆ. ಇದರ ಮೂಲಕ ಶಾಂತಿ–ಸುವ್ಯವಸ್ಥೆಗೆ ಭಂಗವುಂಟಾಗುತ್ತದೆಂಬ ಕಾರಣಕ್ಕಾಗಿ ಜಿಲ್ಲಾಡಳಿತ ಪುರಾತತ್ವ ಇಲಾಖೆ ಮತ್ತು ಪೊಲೀಸ್ ಅಧಿಕಾರಿಗಳು ನ್ಯಾಯಯುತ ಕ್ರಮ ಕೈಗೊಂಡಿದ್ದಾರೆ. ಆ ಉರುಸ್ ನಡೆಯುವ ಸಂದರ್ಭ ಬಿಟ್ಟು, ಯಾವುದೇ ದಿವಸದಲ್ಲಿ ತಾವು ಹೋಗಿ ಪೂಜೆ ಮಾಡಬಹುದು. ಸಿ.ಟಿ. ರವಿಯವರು ಚಿಕ್ಕಮಗಳೂರನ್ನು ಮತ್ತೆ ನಮ್ಮ ಬಳ್ಳಾರಿ ಜಿಲ್ಲೆಗೆ ತರಬಾರದೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ : ಯಾವಾಗಿನಿಂದ ಈ ಉರುಸ್ ನಡೆಯುವುದಕ್ಕೆ ಪ್ರಾರಂಭವಾಯಿತೆಂದು ತಾವು ಹೇಳಲಿಲ್ಲ.

ಅಧ್ಯಕ್ಷರು : ಈಗ ಕಾಲಾವಕಾಶ ಇಲ್ಲ, ಕುಳಿತುಕೊಳ್ಳಿ, ಪ್ರಶ್ನೆಗೆ ಅವಕಾಶ ಇಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ, ಸತ್ಯ ಮುಚ್ಚಿಡುತ್ತಿದ್ದಾರೆ. ಉರುಸ್ ಅನ್ನು ಯಾವಾಗಿನಿಂದ ಆಚರಿಸುತ್ತಿದ್ದಾರೆ? ಯಾವಾಗಿನಿಂದ ಪ್ರಾರಂಭವಾಯಿತು? ಆ ಮಾಹಿತಿ ಎಲ್ಲವೂ ಅವರ ಹತ್ತಿರ ಇರುತ್ತದೆ. ಈ ಸದನದಲ್ಲಿ ಸತ್ಯ ಮುಚ್ಚಿಡಬಾರದು.

ಅಧ್ಯಕ್ಷರು : ಈ ತರಹವಾದರೆ ಹೇಗೆ/ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಮತ್ತೆ ಕ್ಲಾರಿಫಿಕೇಶನ್ ಕೇಳುತ್ತಾ ಹೋದರೆ ಹೇಗೆ?

ಶ್ರೀ. ಸಿ. ಟಿ. ರವಿ : ನಾನು ಕ್ಲಾರಿಫಿಕೇಶನ್ ಕೇಳುತ್ತಿಲ್ಲ. ಬಹಳ ವರ್ಷಗಳಿಂದ ಉರುಸ್ ನಡೆಯುತ್ತಿದೆ ಎಂದು ಹೇಳಿದರು. ಯಾವಾಗಿನಿಂದ ಎಂಬುದನ್ನು ತಾವು ಅವರಿಂದ ಹೇಳಿಸಬೇಕು.

ಅಧ್ಯಕ್ಷರು : ಅವರಿಗೆ ಉತ್ತರ ಕೊಡುವ ಅಗತ್ಯವಿಲ್ಲ. ಏಕೆಂದರೆ, ಇಷ್ಟ ಬಂದ ರೀತಿಯಲ್ಲಿ ಕೇಳುತ್ತಾ ಹೋದರೆ, ಅದಕ್ಕೆಲ್ಲಾ ದಯಮಾಡಿ ಉತ್ತರ ಹೇಳಬೇಡಿ. ಈಗ ನಿಯಮ 69ರ ಮೇಲಿನ ಚರ್ಚೆ. ಮಾನ್ಯ ದೇಶಪಾಂಡೆಯವರೇ, ಭೋಜನ ವಿರಾಮವಾದ ನಂತರ ತೆಗೆದುಕೊಳ್ಳೋಣವೇ ಅಥವಾ ತಾವು ಬಹಳ ಅವರಸರದಲ್ಲಿದ್ದೀರಿ, ಊರಿಗೆ ಹೊರಟಿದ್ದೇನೆಂದು ಹೇಳಿದ್ದೀರಿ. ವಿಷಯ ಪ್ರಸ್ತಾಪಿಸಿ ಮುಗಿಸುವುದಾದರೆ, ಈಗ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ : ನನ್ನ ಊರಿನಲ್ಲಿ ಒಂದೆರಡು ಕಾರ್ಯಕ್ರಮಗಳಿರುವುದರಿಂದ ಸಂಜೆಗೆ ನಾನು ಹೋಗುತ್ತಿದ್ದೇನೆ. ನೀವು ಈಗ start ಮಾಡು ಎಂದರೆ, ನಾನು ಪ್ರಾರಂಭ ಮಾಡುತ್ತೇನೆ. ಬೇಕಾದರೆ, ಸ್ವಲ್ಪ ಹೊತ್ತು ಮಾತನಾಡಿ, ಅಡ್ಜರ್ನ್ ಮಾಡಿ ನಂತರ ಮಧ್ಯಾಹ್ನ ಒಂದು ಲಘುವಾಗಿ ಮಾತನಾಡಿ ಮುಗಿಸುತ್ತೇನೆ. ಅದು ನಿಮಗೆ ಬಿಟ್ಟ ವಿಚಾರ. ಅಥವಾ House adjourn ಮಾಡಿ ಊಟ ಮಾಡಿ ಮಧ್ಯಾಹ್ನ ಶುರು ಮಾಡಿದರೆ, ನಮಗೇನೂ ಅಭ್ಯಂತರ ಇಲ್ಲ. ಮಾತನಾಡುತ್ತೇನೆ. ಇದರ discussion Friday ಮುಗಿಯಬೇಕಾಗಿತ್ತು. As per our discussion, CET Bill ಬಂದು ಇದರ discussion ಆಗಿಲ್ಲ. ಹಾಗಾಗಿ.....

ಅಧ್ಯಕ್ಷರು : ಈಗ ಆರಂಭ ಮಾಡುತ್ತೀರೋ.....ಬೇಗ ಮುಗಿಸುವುದಾದರೆ, ಈಗಲೇ ಮುಗಿಸಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಪ್ರಾರಂಭ ಮಾಡಿ 15 ನಿಮಿಷದಲ್ಲಿ ಹೇಗೆ ಮುಗಿಸಬೇಕು?

ಅಧ್ಯಕ್ಷರು : ಈಗ ಪ್ರಾರಂಭ ಮಾಡುವುದಾದರೆ, ಸರಿ ಅಥವಾ ಲಂಚ್‌ಗೆ adjourn ಆದನಂತರ 2.30ಕ್ಕೆ ಬಂದು ಚರ್ಚೆ ಮಾಡೋಣ.

ಶ್ರೀ ಎ.ಟಿ. ರಾಮಸ್ವಾಮಿ : ಮೊನ್ನೆ Friday ದಿವಸದಂದು ನಿಯಮ 69ರ ಕೆಳಗೆ ನನ್ನನ್ನು ಮಾತನಾಡಲು ತಾವು ಕರೆದಿರಿ. ವಿರೋಧ ಪಕ್ಷದ ತಾವ್ಯಾರೂ ಇರಲಿಲ್ಲ. ನೀವು ಇಲ್ಲದೆ ಮಾತನಾಡುವುದು ಅರ್ಥಹೀನವಾಗುತ್ತದೆಂದು ನಾನು ಹೇಳಿದೆ. ವಿರೋಧ ಪಕ್ಷದವರು ಇರಬೇಕು.